ಕೋರ ಮಂಗಲ, ಅಡುಗೋಡಿ ಮತ್ತು ಮೈಕೋ ಲೇ ಔಟ್ ಮೂಲಕ ಹಾದು ಹೋಗುವಂತೆ ರಿಂಗ್ ರೂಟ್ ಆಗಿ ಪರಿವರ್ತಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಸೂಕ್ತವಲ್ಲ

ನಿಲುಗಡೆ ಮಾಡಲಾಗಿರುವ ಔರಾದ್ ಬೆಂಗಳೂರು ಸೂಪರ್ ಡಿಲಕ್ಸ್ ಬಸ್ಸಿನ ಮರು ಸಂಚಾರ ಪ್ರಾರಂಭ

919 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಔರದ್-ಬೆಂಗಳೂರು ನಗರ ಸೂಪರ್ ಡಿಲಕ್ಸ್ ಬಸ್ಸಿನ ಸಂಚಾರವನ್ನು ಯಾವಾಗ ಪ್ರಾರಂಭಿಸಲಾಯಿತು ಮತ್ತು ಆ ಬಸ್ಸು ಯಾವ ಮಾರ್ಗಗಳ ಮೂಲಕ ಬೆಂಗಳೂರು ತಲುಪುತ್ತಿತ್ತು?

ಆ) ಆ ಬಸ್ಸು ಎಷ್ಟು ದಿನ ಈ ಮಾರ್ಗದಲ್ಲಿ ಸಂಚಾರ ಮಾಡಿರುತ್ತದೆ?

ಇ) ಯಾವುದೇ ಕಾರಣಗಳನ್ನು ನೀಡದೆ ಆ ಮಾರ್ಗದ ಬಸ್ ಸಂಚಾರವನ್ನು ಹಠಾತ್ತನೇ ನಿಲ್ಲಿಸಲು ಕಾರಣಗಳೇನು?

ಈ) ಒಂದು ವೇಳೆ ಗಳಿಕೆ ಇಲ್ಲದಿದ್ದೋ ಅಥವಾ ಪ್ರಯಾಣಿಕರಿಲ್ಲದಿದ್ದೋ ಆ ಬಸ್ಸಿನ ಸಂಚಾರವನ್ನು ನಿಲ್ಲಿಸಿದ್ದಲ್ಲಿ ಪುನಃ ಈ ಬಸ್ಸಿನ ಸಂಚಾರವನ್ನು ಔರಾದ್ -ಬೀದರ್-ಹೈದರಾಬಾದ್ ಮೂಲಕವಾಗಿ ಬೆಂಗಳೂರಿಗೆ ತಲುಪುವಂತೆ ಸಂಚಾರವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಔರದ್-ಬೆಂಗಳೂರು ಸುಖಾಸೀನ ಸಾರಿಗೆಯನ್ನು ತಾ. 17-5-1992ರಂದು ಪ್ರಾರಂಭಿಸಲಾಯಿತು. ಮತ್ತು ಸಹ ಸಾರಿಗೆಯನ್ನು ಭಾಲ್ಕಿ, ಹುಮ್ನಾಬಾದ್, ಗುಲ್ಬರ್ಗ, ಜೇವರ್ಗಿ, ಶಹಾಪುರ, ಸುರಪುರ, ಲಿಂಗಸೂಗೂರು, ಸಿಂಧನೂರು, ಸಿರುಗುಪ್ಪ, ಬಳ್ಳಾರಿ, ಚಳ್ಳಕೆರೆ, ಹಿರಿಯೂರು, ಸಿರಾ ಮತ್ತು ತುಮಕೂರು ಮಾರ್ಗವಾಗಿ ಬೆಂಗಳೂರು ತಲುಪುತ್ತಿತ್ತು.

ಆ) 88 ದಿವಸಗಳು.

ಇ) ಪ್ರಯಾಣಿಕರ ಬೆಂಬಲ ಪಡೆಯಲು ವಿಫಲವಾಗಿದ್ದರಿಂದ.

ಈ) ಆಂಧ್ರ ಪ್ರದೇಶ ಸರ್ಕಾರದೊಡನೆ ಮುಂದಿನ ಅಂತರ ರಾಜ್ಯ ಸಾರಿಗೆ ಒಪ್ಪಂದದ ಸಮಯದಲ್ಲಿ ಇದನ್ನು ಪರಿಶೀಲಿಸಲಾಗುವುದು.

ಆಹಾರ ಇಲಾಖೆಯ ವತಿಯಿಂದ ಸಂಚಾರಿ ನ್ಯಾಯಬೆಲೆ ಅಂಗಡಿ

284 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ, (ಔರದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರು ಗುಡ್ಡಗಾಡು ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಬಡ ಜನರಿಗೆ ಸಂಚಾರಿ ನ್ಯಾಯ ಬೆಲೆ ಅಂಗಡಿಗಳ ಮೂಲಕ ಪಡಿತರ ವಸ್ತುಗಳನ್ನು ವಿತರಣೆ ಮಾಡಲು ವಾಹನಗಳನ್ನು ಖರೀದಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇದಕ್ಕಾಗಿ ಎಷ್ಟು ವಾಹನಗಳನ್ನು ಖರೀದಿಸಲಾಗಿದೆ. ಹಾಗೂ ಪ್ರತಿಯೊಂದು ವಾಹನಕ್ಕೂ ತಗಲಿರುವ ವೆಚ್ಚವೆಷ್ಟು?

ಇ) ಈ ವಾಹನಗಳನ್ನು ಖರೀದಿಸುವಾಗ ನಿಯಮಾನುಸಾರವಾಗಿ ಟೆಂಡರ್ ಗಳನ್ನು ಕರೆಯಲಾಗಿದೆಯೇ? ಹಾಗೂ ಯಾವ ಯಾವ ಸಂಸ್ಥೆಗಳಿಂದ ಈ ವಾಹನಗಳನ್ನು ಖರೀದಿಸಲಾಗಿದೆ.

ಈ) ಬೀದರ್ ಜಿಲ್ಲೆಗೆ ಇಂತಹ ಎಷ್ಟು ವಾಹನಗಳನ್ನು ನೀಡಲಾಗಿದೆ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಉ) ಈ ವಾಹನಗಳ ಖರೀದಿಯಲ್ಲಿ ಅವ್ಯವಹಾರಗಳೇನಾದರೂ ನಡೆದಿದೆಯೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ನಿಜ

ಆ) 13 ವಾಹನಗಳನ್ನು ಖರೀದಿಸಲಾಗಿದೆ. ತಗುಲಿದ ಒಟ್ಟು ಮೊತ್ತ ರೂಪಾಯಿಗಳು 51,02,905-86 ಆಗಿರುತ್ತದೆ. ಪ್ರತಿಯೊಂದು ವಾಹನಕ್ಕೆ ತಗುಲಿದ ವೆಚ್ಚ 3,92,531-22 ಮಾತ್ರ.

ಇ) ವಾಹನಗಳನ್ನು ಖರೀದಿಸುವಾಗ ಅಧಿಕೃತ ಡೀಲರ್ ಗಳಿಂದ ಭಾರತ ಸರ್ಕಾರದ ಡಿ.ಜಿ.ಎಸ್. ಅಂಡ್ ಡಿ. ಅಂಗೀಕೃತ ದರಪಟ್ಟಿಗಳನ್ನು ಬೇರೆ ಬೇರೆ ವಾಹನಗಳ ಸಂಬಂಧಪಟ್ಟ ಕಂಪನಿಗಳಿಂದ ಬೆಲೆಗಳ ಪಟ್ಟಿಗಳನ್ನು ತರಿಸಿ ಪರಿಶೀಲಿಸಲಾಗಿದೆ. 13 ಸ್ವರಾಜ್ ಮಜ್ದಾ ವಾಹನಗಳನ್ನು ಕೆ.ಹೆಚ್.ಟಿ. ಏಜನ್ಸೀಸ್ ಪಿ. ಲಿಮಿಟೆಡ್, ಬೆಂಗಳೂರು ಇವರಿಂದ ಖರೀದಿಸಲಾಗಿದೆ.

ಈ) ಇಲ್ಲ.

ಉ) ಇಲ್ಲ.

ಗುಲ್ಬರ್ಗಾ ವಿಭಾಗದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅವ್ಯವಹಾರ.

507 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಗುಲ್ಬರ್ಗಾ ವಿಭಾಗದಲ್ಲಿ ಬಸ್ಸುಗಳು ನಿಗಧಿತ ವೇಳೆಯಲ್ಲಿ ಸಂಚರಿಸದೆ ಪ್ರಯಾಣಿಕರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಉದಾ : ಸೇಡಂದಿಂದ ಮುಂಜಾನೆ 7-30 ಗಂಟೆಗೆ ಗುರುಮಿಟ್ ಕಲ್ಲಿಗೆ ಹೋಗುವ ಬಸ್ಸು ದಿನಾಂಕ :4-1-1992, 13-1-92, 17-1-92, 20-1-1992, 22-1-92, 25-1-1992, 27-1-1992, 28-1-1992, 29-1-1992, 31-1-1992 ದಿನಗಳಲ್ಲಿ ಸಂಚರಿಸಿಲ್ಲದಿರುವುದು ನಿಜವೇ?